2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ. 5027/2022**

ದಿಃ22.08.2024
ಚಾಸಾ-1 ಪ್ರಾಸಾ-1

| | |
|---|---|
| ಹೆಸರು | ಃ ರೂಪ |
| ತಂದೆಯ ಹೆಸರು | ಃ ನಾರಾಯಣಗೌಡ |
| ವಯಸ್ಸು | ಃ 48 |
| ಉದ್ಯೋಗ | ಃ ಗೃಹಿಣಿ |
| ವಾಸ | ಃ ಪಟೇಲ್ ಕಾಳೇಗೌಡನದೊಡ್ಡಿ |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ-1 ರಿಂದ 6 ರವರು ಗೊತ್ತು. ಚಾಸಾ-2 ರವರು ನನ್ನ ಅಳಿಯ. ಚಾಸಾ-3 ರವರು ನನ್ನ ತಮ್ಮ. ಚಾಸಾ-4 ಮತ್ತು 6 ರವರು ನನ್ನ ಮಕ್ಕಳು.

ದಿಃ09.05.2020 ರಂದು ಮಧ್ಯಾಹ್ನ 1-30 ಗಂಟೆಯಲ್ಲಿ ನಾನು ಹಾಗೂ ಚಾಸಾ-2 ರಿಂದ 7 ರವರು ನಮ್ಮ ಮನೆಯಲ್ಲಿರುವಾಗ ಆರೋಪಿ-1 ರಿಂದ 6 ರವರು ಇನ್ನೋವಾ ಕಾರಿನಲ್ಲಿ ನಮ್ಮ ಬಳಿ ಬಂದು ಮನೆಯ ಮುಂಭಾಗದ ಗೇಟ್ ಬೀಗವನ್ನು ಒಡೆದು ಒಳಗೆ ಬಂದು 1 ರಿಂದ 6 ನೇ ಆರೋಪಿತರು, ಚಾಸಾ-4 ರವರನ್ನು ನಮ್ಮ ಜೊತೆ ಕಳುಹಿಸಿಕೊಡಿ ಇಲ್ಲದಿದ್ದಲ್ಲಿ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆ. ಚಾಸಾ-4 ರವರನ್ನು ಆರೋಪಿ-3 ರವರ ಜೊತೆ ಮದುವೆ ಮಾಡಿಕೊಡದಿದ್ದ ಪಕ್ಕದಲ್ಲಿ ಚಾಸಾ-4 ರವರನ್ನು ಕರೆದುಕೊಂಡು ಹೋಗಿ ಮದುವೆ ಮಾಡಿಕೊಳ್ಳುತ್ತೇವೆಂದು ಹೇಳಿರುತ್ತಾರೆ. ಆ ಸಮಯದಲ್ಲಿ ಮನೆಯ ಒಳಗಿದ್ದ ಚಾಸಾ-4 ರವರನ್ನು ಆರೋಪಿತರು ಹೊರಗಡೆ ಎಳೆದುಕೊಂಡು ಹೋಗುತ್ತಿದ್ದಾಗ, ನಾನು ಚಾಸಾ-4 ರವರನ್ನು ಆರೋಪಿತರಿಂದ ಬಿಡಿಸಿಕೊಂಡಿರುತ್ತೇನೆ. ಆರೋಪಿತರು ತಮ್ಮ ಕೈಗಳಲ್ಲಿ ದೊಣ್ಣೆ, ಚಾಕು, ಡ್ರಾಗನ್, ಕಬ್ಬಿಣದ ರಾಡುಗಳನ್ನು ತೆಗೆದುಕೊಂಡು ಬಂದಿದ್ದು, ಅವರುಗಳ ಪೈಕಿ 5 ನೇ ಆರೋಪಿಯು ಚಾಸಾ-2 ರವರ ತಲೆಯ

ಮೇಲೆ ಚಾಕು ಮತ್ತು ಡ್ರಾಗನ್‌ನಿಂದ ಹಲ್ಲೆ ಮಾಡಿರುತ್ತಾರೆ. 4 ನೇ ಆರೋಪಿಯು ಚಾಸಾ-3 ರವರಿಗೆ ಕಬ್ಬಿಣದ ರಾಡಿನಿಂದ ತಲೆಗೆ ಹಲ್ಲೆ ಮಾಡಿರುತ್ತಾರೆ. ನಂತರ ಆರೋಪಿ-1 ರಿಂದ 3 ರವರು ನನಗೆ ಅವಾಚ್ಯ ಶಬ್ಧಗಳಿಂದ ಬೈದು ನನ್ನ ಮೈಮೇಲಿದ್ದ ಬಟ್ಟೆಗಳನ್ನು ಹರಿದು ಹಾಕಿ ಹಲ್ಲೆ ಮಾಡಿ, ಚಾಸಾ-4 ರವರನ್ನು ಸಾಯಿಸುತ್ತೇವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರು ನಮ್ಮ ಮನೆಯಲ್ಲಿದ್ದ ಕಿಟಕಿ ಗಾಜು ಹಾಗೂ ಇನ್ನಿತರೆ ವಸ್ತುಗಳನ್ನು ಒಡೆದು ಹಾಕಿರುತ್ತಾರೆ. 1 ರಿಂದ 3 ನೇ ಆರೋಪಿತರು ನನ್ನನ್ನು ಕೆಳಗೆ ಬೀಳಿಸಿಕೊಂಡು ಕಾಲಿನಿಂದ ತುಳಿದು ಮೈ ಕೈ ನೋವುಂಟು ಮಾಡಿರುತ್ತಾರೆ. ನಂತರ ಮನೆಯ ಅಕ್ಕ-ಪಕ್ಕದವರು ಬಂದು ಚಾಸಾ-2 ರಾಘವೇಂದ್ರರವರನ್ನು ಕನಕಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನಂತರ ಈ ಬಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ, ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋ ಡಿಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1, 1(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಬೆಳಗ್ಗೆ 10-00 ರಿಂದ 10-30 ಗಂಟೆಯವರೆಗೆ ನನ್ನ ಹಾಗೂ ಚಾಸಾ-7 ಮತ್ತು 8 ರವರ ಸಮಕ್ಷಮ ಮಹಜರನ್ನು ಜರುಗಿಸಿರುತ್ತಾರೆ, ಸಾಕ್ಷಿಯು ಸದರಿ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2, 2(ಎ) ಎಂದು ಗುರುತಿಸಲಾಯಿತು. ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಪೊಲೀಸರು ಒಡದೆ ಗಾಜಿನ ಚೂರು, ಇನ್ನೊವಾ ಕಾರು, ಕಬ್ಬಿಣದ ರಾಡು, ಕಲ್ಲು, ಚಾಕು, ಸ್ಟೀಲ್ ಬೀಗ, ಚಾಸಾ-2 ರವರು ಘಟನಾ ಸಮಯದಲ್ಲಿ ಧರಿಸಿದ್ದ ಕಪ್ಪು ಬಣ್ಣದ ಟಿಶರ್ಟನ್ನು ಮತ್ತು ಬನಿಯನ್‌ನ್ನು ಅಮಾನತುಪಡಿಸಿಕೊಂಡಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಎರಡು ಬಿಳಿ ಬಟ್ಟೆಯಲ್ಲಿ ಸೀಲಾದ ವಸ್ತುಗಳನ್ನು ತೆರೆದು ನೋಡಲಾಗಿ ಅದರಲ್ಲಿರುವ ಕಪ್ಪು ಬಣ್ಣದ ಟಿಶರ್ಟು, ಮತ್ತು ಬಿಳಿ ಬಣ್ಣದ ಅರ್ಧ ತೋಳಿನ ಬನಿಯನ್ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಎಂಓ-1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಸ್ಟೀಲ್ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಎಂಓ-3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಪೇಪರ್ ಬಾಕ್ಸಿನಲ್ಲಿರುವ ಒಡೆದ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅದನ್ನು ಎಂಓ- 4 ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊವಾ ಕಾರನ್ನು ಫೋಟೋ ಮೂಲಕ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಬಿಳಿ ಬಟ್ಟೆಯಲ್ಲಿ ಸೀಲಾದ ವಸ್ತುಗಳನ್ನು ತೆರೆದು ನೋಡಲಾಗಿ ಅದರಲ್ಲಿರುವ ಸ್ಟೀಲ್ ಚಾಕುವನ್ನು ನೋಡಿ ಗುರುತಿಸಿದ್ದು ಅದನ್ನು ಎಂಓ-5 ಎಂದು ಗುರುತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಬಿಳಿ ಬಟ್ಟೆಯಲ್ಲಿ ಸೀಲಾದ ವಸ್ತುಗಳನ್ನು ತೆರೆದು ನೋಡಲಾಗಿ ಅದರಲ್ಲಿರುವ ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅದನ್ನು ಎಂಓ-6 ಎಂದು ಗುರುತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಬಿಳಿ ಬಟ್ಟೆಯಲ್ಲಿ ಸೀಲಾದ ವಸ್ತುಗಳನ್ನು ತೆರೆದು ನೋಡಲಾಗಿ ಅದರಲ್ಲಿರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಎಂಓ-7 ಎಂದು ಗುರುತಿಸಲಾಯಿತು.

ಆರೋಪಿತರು ನಮ್ಮ ಮನೆಗೆ ನುಗ್ಗಿ ನಮ್ಮ ಮನೆಯಲ್ಲಿರುವ ವಸ್ತುಗಳಿಗೆ ಹಾನಿಯುಂಟು ಮಾಡಿದ್ದರಿಂದ ಸುಮಾರು ಒಂದು ಸಾವಿರ ರೂಪಾಯಿಗಳಿಗೂ ಹೆಚ್ಚು ನಷ್ಟವನ್ನು ಉಂಟುಮಾಡಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ಮರುಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು:** ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯವಕಾಶ ಕೋರಿರುತ್ತಾರೆ. ಯಾವುದೇ ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.